(4) ಸಭೆಯ ಮುಂದಿಡಲಾದ ಕಾಗದ ಪತ್ರಗಳು.

I ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ.

1. ಹಲವು ಜೀವನಾವಶ್ಯಕ ವಸ್ತುಗಳ ಮಾರಾಟದ ವಹಿವಾಟಿನ ಮೇಲೆ ನೀಡಬೇಕಾದ ತೆರಿಗೆಗೆ ಪಿನಾಯಿತಿ ನೀಡಿ ದಿನಾಂಕ 31-12-99ರಂದು ಹೊರಡಿಸಿದ ಡಿಪಿಎಎಲ್ 48 ಶಾಸನ 99ನೇ ಸಂಖ್ಯೆಯ ಅಧ್ಯಾದೇಶ;

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8 (3)ನೇ ಪ್ರಕರಣದ ಮೇರೆಗೆ;

2. 1977ರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿಯ ನಿಯಮ 9ಕ್ಕೆ ತಿದ್ದುಪಡಿ ಮಾಡಿ ದಿನಾಂಕ 7-12-99ರಂದು ಹೊರಡಿಸಿದ ಡಿಪಿಎಆರ್ 52 ಎಸ್ಆರ್ಆರ್ 98ನೇ ಸಂಖ್ಯೆಯ ಆದೇಶ;

3. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಸೇವೆಗಳ (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ತಂದು ದಿನಾಂಕ 7-10-99ರಂದು ಹೊರಡಿಸಿದ ಸಿಆಸುಇ 60 ಸೇನಿಡಿ 98ನೇ ಸಂಖ್ಯೆಯ ಅಧಿಸೂಚನೆ;

4. ಕರ್ನಾಟಕ ನಾಗರೀಕ ಸೇವೆಗಳಿಗೆ ಸಂಬಂಧಿಸಿದಂತೆ 1957ರ ಅನುಸೂಚಿ 1, 2 ಮತ್ತು 3ಕ್ಕೆ ತಿದ್ದುಪಡಿ ತಂದು ದಿನಾಂಕ 30-11-99ರಂದು ಹೊರಡಿಸಿದ ಸಿಆಸುಇ 4 ಸೇನಿಇ 98ನೇ ಸಂಖ್ಯೆಯ ಅಧಿಸೂಚನೆ;

1956ರ ಕರ್ನಾಟಕ ಸಚಿವರುಗಳ ವೇತನ ಹಾಗೂ ಭತ್ಯೆಗಳ ಅಧಿನಿಯಮ 12(2ಎ)(ಎ) ಪ್ರಕರಣದ ಮೇರೆಗೆ.

5. ಮಾನ್ಯ ಸಣ್ಣ ಕೈಗಾರಿಕಾ ಸಚಿವರಾದ ಶ್ರೀ ಎಸ್.ಆರ್.ಕಾಶಪ್ಪನವರ್ ಅವರು ವಿದೇಶ ಪ್ರವಾಸ ಕೈಗೊಂಡ ಸಂಬಂಧವಾಗಿ ದಿನಾಂಕ 18-1-2000ರಂದು ಹೊರಡಿಸಿದ ಡಿಪಿಎಆರ್ 193 ಜಿಎಎಂ 99ನೇ ಸಂಖ್ಯೆಯ ಆದೇಶ;

6. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣ, ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆ ಇವರುಗಳು ದಿನಾಂಕ: 27-1-2000ದಿಂದ 4-2-2000ದವರೆಗೆ ಸ್ವಿಡ್ಸರ್ಲ್ಯಾಂಡ್ ಹಾಗೂ ಯು.ಕೆ.ದೇಶಗಳಿಗೆ ಪ್ರವಾಸ ಕೈಗೊಂಡ ಸಂಬಂಧವಾಗಿ ದಿನಾಂಕ 25-1-2000ದಂದು ಹೊರಡಿಸಿದ ಡಿಪಿಎಆರ್ 4 ಜಿಎಎಂ 2000ನೇ ಸಂಖ್ಯೆಯ ಆದೇಶ;

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 39ನೇ ಕಲಮಿನ ಮೇರೆಗೆ.

7. ದರ 20 ರೂ.ಗಳಿಗೆ ಮೀರದ ಬಾಲ್ ಪೆನ್ ಮತ್ತು ರೀಫಿಲ್ಸ್‌ಗಳ ಮಾರಾಟದ ಮೇಲೆ ತಕ್ಷಣದಿಂದ 31-3-2000ರವರೆಗೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 7-10-1999ರಂದು ಹೊರಡಿಸಿದ ಎಫ್‌ಡಿ 171 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

8. ಬೇವಿನ ಎಣ್ಣೆ ಮಾರಾಟದ ಮೇಲೆ ತಕ್ಷಣದಿಂದ ಪಾವತಿಸಬೇಕಾದ ತೆರಿಗೆಯನ್ನು ಶೇಕಡ 2 ಕಡಿಮೆಗೊಳಿಸಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 122 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

9. 31-3-99ರ ದಿನಾಂಕದ ಎಫ್‌ಡಿ 86 ಸಿಎಸ್‌ಎಲ್ (3)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 156 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

10. ರೇಷ್ಮೆ ಬಟ್ಟೆಗಳ ಮಾರಾಟದ ಮೇಲೆ ತಕ್ಷಣದಿಂದ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 7-10-00ರಂದು ಹೊರಡಿಸಿದ ಎಫ್‌ಡಿ 54 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

11. ರೋಟರಿ ಬೆಂಗಳೂರು ಮಿಡ್‌ಟೌನ್ ಸೇವಿಂಗ್ ಬ್ರಿಗೇಡ್ ಟ್ರಸ್ಟ್ ಬೆಂಗಳೂರು ಇವರಿಗೆ ಲೈಫ್ ಸೇವಿಂಗ್ ಇಕ್ವಿಪ್‌ಮೆಂಟ್ಸ್ ಮಾರಾಟ ಮಾಡುವ ವರ್ತಕರು ತಕ್ಷಣದಿಂದ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 135 ಸಿಎಸ್‌ಎಲ್ 99 (1)ನೇ ಸಂಖ್ಯೆಯ ಅಧಿಸೂಚನೆ;

12. ಚಿನಿವಾರ ಹಾಗೂ ವಂಶ (ನಾಣ್ಯ) (ಬುಯನ್ ಮತ್ತು ಸ್ಪೇಸಿ) ಮಾರಾಟದ ವಹಿವಾಟಿನ ಮೇಲೆ ತಕ್ಷಣದಿಂದ ಪಾವತಿಸಬೇಕಾದ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 160 ಸಿಎಸ್‌ಎಲ್ 99(1)ನೇ ಸಂಖ್ಯೆಯ ಅಧಿಸೂಚನೆ;

13. 31-3-99ರ ದಿನಾಂಕ ಎಫ್‌ಡಿ 85 ಸಿಎಸ್‌ಎಲ್ 99 (5)ನೇ ಸಂಖ್ಯೆಯ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 160 ಸಿಎಸ್‌ಎಲ್ 99 (2)ನೇ ಸಂಖ್ಯೆಯ ಅಧಿಸೂಚನೆ;

14. 31-3-99ರ ದಿನಾಂಕ ಎಫ್‌ಡಿ 86 ಸಿಎಸ್‌ಎಲ್ 99 (4)ನೇ ಸಂಖ್ಯೆಯ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 7-10-99ರಂದು ಹೊರಡಿಸಿದ

ಎಫ್‌ಡಿ 160 ಸಿಎಸ್‌ಎಲ್ 99(3)ನೇ ಸಂಖ್ಯೆಯ ಅಧಿಸೂಚನೆ.

15. ಕರ್ನಾಟಕ ಭೂ ಸೇನಾ ನಿಗಮವು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದಡಿ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡುವ ಗುತ್ತಿಗೆ ಕೆಲಸಗಳಿಗೆ ಸಂಬಂಧಿಸಿದಂತೆ ತಕ್ಷಣದಿಂದ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 8-10-99ರಂದು ಹೊರಡಿಸಿದ ಎಫ್‌ಡಿ 38 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

16. 1986ರ ಕರ್ನಾಟಕ ಅಬಕಾರಿ ಭಾರತೀಯ ಹಾಗೂ ವಿದೇಶಿ ಮದ್ಯದ ಮಾರಾಟ ನಿಯಮದಡಿಯಲ್ಲಿ ಮದ್ಯ ವಿತರಣೆ ಮಾಡುವ ಪರವಾನಗಿ ಹೊಂದಿದ, 1956ರ ಕಂಪನಿ ಕಾಯ್ದೆಯಡಿ ನೊಂದಾಯಿತಗೊಂಡ ಸರ್ಕಾರಿ ಕಂಪನಿಗಳ ವರ್ತಕರು, ಮಾರಾಟ ಮಾಡುವ ಎಲ್ಲಾ ರೀತಿಯ ಮದ್ಯಗಳ ವಹಿವಾಟು ಸಂಬಂಧಿಸಿದಂತೆ ಪಾವತಿಸಬೇಕಾದ ತೆರಿಗೆಗೆ 1-10-99ರಿಂದ 31-3-2000ದವರೆಗೆ ವಿನಾಯಿತಿ ನೀಡಿ 13-10-99ರಂದು ಹೊರಡಿಸಿದ ಎಫ್‌ಡಿ 222 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

17. ಯೂರಿಯಾ ಹೊರತುಪಡಿಸಿ ಉಳಿದ ರಸಾಯನಿಕ ಗೊಬ್ಬರಗಳ ವಹಿವಾಟಿನ ಮೇಲೆ ತಕ್ಷಣದಿಂದ 31-3-2000ರವರೆಗೆ ತೆರಿಗೆ ವಿನಾಯಿತಿ ನೀಡಿ ದಿನಾಂಕ 30-10-99ರಂದು ಹೊರಡಿಸಿದ ಎಫ್‌ಡಿ 117 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

18. ಸೋಫಿಯ ಆಪರ್ಚುನಿಟಿ ಸ್ಕೂಲ್ ನಂ. 17, ಪ್ಯಾಲೇಸ್‌ರಸ್ತೆ, ಬೆಂಗಳೂರು-1 ಇವರಿಗೆ ನೊಂದಾಯಿತ ವರ್ತಕರು ಮಾರಾಟ ಮಾಡುವ ಜನರೇಟರ್ ಸೆಟ್‌ಗಳ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಒಂದು ವರ್ಷದವರೆಗೆ ವಿನಾಯಿತಿ ನೀಡಿ ದಿನಾಂಕ 2-11-99ರಂದು ಹೊರಡಿಸಿದ ಎಫ್‌ಡಿ 199 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

19. ಬೆಂಗಳೂರಿನಲ್ಲಿ ರೂ.50,000.00ಕ್ಕೂ ಕಡಿಮೆ ಬೆಲೆಯುಳ್ಳ ಎಲೆಕ್ಟ್ರಾನಿಕ್ ವಸ್ತುಗಳನ್ನು ಹಾಗೂ ಕಂಪ್ಯೂಟರ್ ನಿರ್ವಹಣೆಗೆ ಬಳಸುವ ಪೂರಕ ಬಿಡಿ ಭಾಗಗಳನ್ನು ಮಾರಾಟ ಮಾಡುವ ವರ್ತಕರು ನೀಡಬೇಕಾದ ತೆರಿಗೆಗೆ ದಿನಾಂಕ 1-11-99ರಿಂದ 5-11-99ರವರೆಗೆ ವಿನಾಯಿತಿ ನೀಡಿ ದಿನಾಂಕ 3-11-99ರಂದು ಹೊರಡಿಸಿದ ಎಫ್‌ಡಿ 259 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

20. 1-9-98ರ ದಿನಾಂಕ ಎಫ್‌ಡಿ-12 ಸಿಎಸ್‌ಎಲ್ 97(1)ನೇ ಸಂಖ್ಯೆಯ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 10-11-99ರಂದು ಹೊರಡಿಸಿದ

ಎಫ್‌ಡಿ 90 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

21. ಕಂಪ್ಯೂಟರ್‌ಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ತಕ್ಷಣದಿಂದ ವಿನಾಯಿತಿ ನೀಡಿ ದಿನಾಂಕ 25-11-99ರಂದು ಹೊರಡಿಸಿದ ಎಫ್‌ಡಿ 282 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

22. 7-10-99ರ ದಿನಾಂಕದ ಎಫ್‌ಡಿ 135 ಸಿಎನ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 26-11-99ರಂದು ಹೊರಡಿಸಿದ ಎಫ್‌ಡಿ 135 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

23. ಬೆಂಗಳೂರು ಪ್ರಾಣಿಗಳ ಕ್ರೌರ್ಯ ನಿವಾರಿಸುವ ಸಂಘ (ಎನ್‌ಪಿಸಿಎ), ಇವರಿಗೆ ಮಾರಾಟ ಮಾಡುವ ಹಗುರ ವಾಣಿಜ್ಯ ವಾಹನ ಹಾಗೂ ಹೈಡ್ರಲೀಕ ಲಿಫ್ಟಿಂಗ್ ಯಂತ್ರೋಪಕರಣಗಳ ಮೇಲೆ ತಕ್ಷಣದಿಂದ ಒಂದು ವರ್ಷದ ಅವಧಿಯವರೆಗೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 3-12-99ರಂದು ಹೊರಡಿಸಿದ ಎಫ್‌ಡಿ 101 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

24. 1957ರ ಕರ್ನಾಟಕ ಮಾರಾಟ ತೆರಿಗೆ ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 15-10-99ರಂದು ಹೊರಡಿಸಿದ ಎಫ್‌ಡಿ 162 ಸಿಎಸ್‌ಎಲ್ 98ನೇ ಸಂಖ್ಯೆಯ ಅಧಿಸೂಚನೆ;

25. ದಿನಾಂಕ 7-7-99ರ ಎಫ್‌ಡಿ 154 ಸಿಎಸ್‌ಎಲ್ 98ನೇ ಸಂಖ್ಯೆಯ ಅಧಿಸೂಚನೆಯಲ್ಲಿನ ಕೆಲವು ಪದಗಳನ್ನು ಮಾರ್ಪಡಿಸಿ ದಿನಾಂಕ 29-12-99ರಂದು ಹೊರಡಿಸಿದ ಎಫ್‌ಡಿ 200 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

26. ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸುವ ಸಂಬಂಧವಾಗಿ ದಿನಾಂಕ 1-1-2000ರಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ (1) 99ನೇ ಸಂಖ್ಯೆಯ ಅಧಿಸೂಚನೆ;

1) ಎಫ್‌ಡಿ 107 ಸಿಎಸ್‌ಎಲ್ 89 (6), ದಿನಾಂಕ 31-3-89

2) ಎಫ್‌ಡಿ 83 ಸಿಎಸ್‌ಎಲ್ 96 ದಿನಾಂಕ 19-10-96

3) ಎಫ್‌ಡಿ 43 ಸಿಎಸ್‌ಎಲ್ 97 (1), ದಿನಾಂಕ 2-7-97

4) ಎಫ್‌ಡಿ 43 ಸಿಎಸ್‌ಎಲ್ 97 (11), ದಿನಾಂಕ 2-7-97

5) ಎಫ್‌ಡಿ 183 ಸಿಎಸ್‌ಎಲ್ 98, ದಿನಾಂಕ 19-1-99

6) ಎಫ್‌ಡಿ 86 ಸಿಎಸ್‌ಎಲ್ 99 (7), ದಿನಾಂಕ 31-3-99

7) ಎಫ್‌ಡಿ 86 ಸಿಎಸ್‌ಎಲ್ 99 (15), ದಿನಾಂಕ 31-3-99

8) ಎಫ್‌ಡಿ 117 ಸಿಎಸ್‌ಎಲ್ 99, ದಿನಾಂಕ 30-10-99

9) ಎಫ್‌ಡಿ 154 ಸಿಎಸ್‌ಎಲ್ 99, ದಿನಾಂಕ 7-10-99

10) ಎಫ್‌ಡಿ 122 ಸಿಎಸ್‌ಎಲ್ 99, ದಿನಾಂಕ 7-10-99

11) ಎಫ್‌ಡಿ 262 ಸಿಎಸ್‌ಎಲ್ 99, ದಿನಾಂಕ 25-11-99

27. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99(1)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 1-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ (2) 99ನೇ ಸಂಖ್ಯೆಯ ಅಧಿಸೂಚನೆ.

28. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99(3)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 1-1-2000ರಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ (4)ನೇ 99ನೇ ಸಂಖ್ಯೆಯ ಅಧಿಸೂಚನೆ;

29. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99 (4)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 1-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ (5)99ನೇ ಸಂಖ್ಯೆಯ ಅಧಿಸೂಚನೆ;

30. ದಿನಾಂಕ 31.3.99ರ ಎಫ್‌ಡಿ 86 ಸಿಎಸ್‌ಎಲ್ 99 (14)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 1-1-2000 ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ (6) 99ನೇ ಸಂಖ್ಯೆಯ ಅಧಿಸೂಚನೆ

31. ಅಂಟು ಪದಾರ್ಥ, ಗಾಜಿನ ವಸ್ತುಗಳು, ಮೋಟಾರು ವಾಹನ ಹಾಗೂ ಮತ್ತಿತರ ವಸ್ತುಗಳ ಮಾರಾಟದ ವಹಿವಾಟಿನ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡ 1ರಷ್ಟು ತೆರಿಗೆ ಕಡಿತ ಮಾಡಿ ದಿನಾಂಕ 1-1-99ರಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್(7) 99ನೇ ಸಂಖ್ಯೆಯ ಅಧಿಸೂಚನೆ;

32. ಗಂಧದ ಕಡ್ಡಿ, ಅಲ್ಯೂಮಿನಿಯಂ ಪಾತ್ರೆ, ಮೊಂಬತ್ತಿ ಹಾಗೂ ಮತ್ತಿತರ ವಸ್ತುಗಳ ಮಾರಾಟದ ವಹಿವಾಟಿನ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 1-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್(8)99ನೇ ಸಂಖ್ಯೆಯ ಅಧಿಸೂಚನೆ;

33. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99(13)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 22-1-2000ದಂದು ಹೊರಡಿಸಿದ ಎಫ್‌ಡಿ 1 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

34. ದಿನಾಂಕ 31-3-97ರ ಎಫ್‌ಡಿ 32 ಸಿಎಸ್‌ಎಲ್ 97(22)ನೇ ಸಂಖ್ಯೆಯ ಅಧಿಸೂಚನೆಯಲ್ಲಿನ ಕ್ರಮಸಂಖ್ಯೆ 17ರಲ್ಲಿ ವೈದ್ಯಕೀಯ ಸಾಮಗ್ರಿಗಳ ಮೇಲಿನ ತೆರಿಗೆ ಸಂಬಂಧವಾಗಿ ತಿದ್ದುಪಡಿ ಮಾಡಿ ದಿನಾಂಕ 20-1-2000ದಂದು ಹೊರಡಿಸಿದ ಎಫ್‌ಡಿ 275 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

35. ಮೊಂಬತ್ತಿ, ಕಾಪರ್ ಸಲ್ಫೇಟ್, ಲಾಟರಿ ಟಿಕೆಟ್ ಹಾಗೂ ಮತ್ತಿತರ ವಸ್ತುಗಳ ವ್ಯಾಪಾರದ ಮೇಲಿನ ತೆರಿಗೆಯನ್ನು ತಕ್ಷಣದಿಂದ ಶೇಕಡ 4ರಷ್ಟು ಕಡಿಮೆಗೊಳಿಸಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(1)ನೇ ಸಂಖ್ಯೆಯ ಅಧಿಸೂಚನೆ;

36. ಒಣಮೆಣಸಿಕಾಯಿ, ಮಡಿಸುವ ಕೊಡೆ, ಮುದ್ರೆ ರಹಿತ ವಸ್ತುಗಳು ಹಾಗೂ ಮತ್ತಿತರ ವಸ್ತುಗಳ ಮಾರಾಟದ ಮೇಲಿನ ತೆರಿಗೆಯನ್ನು ತಕ್ಷಣದಿಂದ ಶೇಕಡವಾರು 4ರಷ್ಟು ಕಡಿಮೆಗೊಳಿಸಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(2)ನೇ ಸಂಖ್ಯೆಯ ಅಧಿಸೂಚನೆ;

37. ದಿನಾಂಕ 1-1-2000ದ ಎಫ್‌ಡಿ 304 ಸಿಎಸ್‌ಎಲ್ 99(8)ನೇ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(3)ನೇ ಸಂಖ್ಯೆಯ ಅಧಿಸೂಚನೆ;

38. ಡಿ.ಆಯಿಲ್ಡ್ ಕೇಕ್ ಮಾರಾಟ ಮಾಡುವ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ವಿನಾಯಿತಿ ನೀಡಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(4)ನೇ ಸಂಖ್ಯೆಯ ಅಧಿಸೂಚನೆ;

39. ಅರಿಸಿನ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ವಿನಾಯಿತಿ ನೀಡಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎನ್‌ಎಲ್ 2000(5)ನೇ ಸಂಖ್ಯೆಯ ಅಧಿಸೂಚನೆ;

40. ಅಡಿಗೆ ಎಣ್ಣೆಗಳ ಸೆಕೆಂಡ್ಸ್ (ಎರಡನೆ) ಹಾಗೂ ಸಬ್‌ಸಿಕ್ವೆಂಟ್ (ಅನಂತರದ) ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(5)ನೇ ಸಂಖ್ಯೆಯ ಅಧಿಸೂಚನೆ;

41. ಸಹಕಾರಿ ಸಂಘಗಳು ತಯಾರಿಸಿ ಮಾರಾಟ ಮಾಡುವ ಜಾನುವಾರು ತಿನಿಸುಗಳು, ಸೀಮೆಎಣ್ಣೆ ಸ್ಟೊವ್ ಹಾಗೂ ಮತ್ತಿತರ ವಸ್ತುಗಳ ಮಾರಾಟದ ಮೇಲೆ ತಕ್ಷಣದಿಂದ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 27-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 2000(7)ನೇ ಸಂಖ್ಯೆಯ ಅಧಿಸೂಚನೆ;

42. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99(1)ನೇ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 28-1-2000ದಂದು ಹೊರಡಿಸಿದ ಎಫ್‌ಡಿ 253 ಸಿಎಸ್ಸೆಲ್ 99ನೇ ಸಂಖ್ಯೆಯ ಅಧಿಸೂಚನೆ;

43. ಕಂಪ್ಯೂಟರ್‌ಗಳ ಹಾಗೂ ಕಂಪ್ಯೂಟರ್‌ಗೆ ಸಂಬಂಧಿಸಿದ ಬಿಡಿ ವಸ್ತುಗಳ ಮಾರಾಟದ ಮೇಲಿನ ತೆರಿಗೆಯನ್ನು ತಕ್ಷಣದಿಂದ ಶೇಕಡ 4ರಷ್ಟು ಕಡಿಮೆಗೊಳಿಸಿ ದಿನಾಂಕ 2-2-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 99ನೇ ಸಂಖ್ಯೆಯ ಅಧಿಸೂಚನೆ;

44. ದೇಶೀಯ ಇಟ್ಟಿಗೆ ಮತ್ತು ಹಂಚು, ಕಚ್ಚಾ ರೇಷ್ಮೆ ಹಾಗೂ ಮತ್ತಿತರ ವಸ್ತುಗಳ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 14-1-2000ದಂದು ಹೊರಡಿಸಿದ ಎಫ್‌ಡಿ 204 ಸಿಎಸ್‌ಎಲ್ 99 (1)ನೇ ಸಂಖ್ಯೆಯ ಅಧಿಸೂಚನೆ;

45. ಅಡಿಕೆ, ಕಚ್ಚಾ ಗೋಡಂಬಿ ಹಾಗೂ ಕಿರಾಣಿ ವಸ್ತುಗಳಾದ ಗಸಗಸೆ, ಕೊತ್ತಂಬರಿ ಬೀಜ ಮತ್ತಿತರ ವಸ್ತುಗಳ ಮಾರಾಟ ಮೇಲೆ ಪಾವತಿಸಬೇಕಾದ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡವಾರು ಕಡಿಮೆಗೊಳಿಸಿ ದಿನಾಂಕ 14-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್ 99(2)ನೇ ಸಂಖ್ಯೆಯ ಅಧಿಸೂಚನೆ;

46. ದಿನಾಂಕ 31-3-99ರ ಎಫ್‌ಡಿ 86 ಸಿಎಸ್‌ಎಲ್ 99(2)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 1-1-2000ದಂದು ಹೊರಡಿಸಿದ ಎಫ್‌ಡಿ 304 ಸಿಎಸ್‌ಎಲ್(3)ನೇ ಸಂಖ್ಯೆಯ ಅಧಿಸೂಚನೆ;

ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ 31ನೇ ಪ್ರಕರಣದ ಮೇರೆಗೆ.

47. ರೋಟರಿ ಬೆಂಗಳೂರು ಮಿಡ್‌ಟೌನ್ ಲೈಫ್ ಸೇವಿಂಗ್ ಬ್ರಿಗೇಡ್ ಟ್ರಸ್ಟ್‌ನವರ ಔಷಧಿ ಸರಬರಾಜು ಮಾಡುವ ಆಂಬುಲೆನ್ಸ್ ವಾಹನಕ್ಕೆ ಸಾರ್ವಜನಿಕರ ಹಿತದೃಷ್ಟಿಯಿಂದ ತಕ್ಷಣದಿಂದ 31-3-2000ದವರೆಗೆ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 7-10-99ರಂದು ಹೊರಡಿಸಿದ ಎಫ್‌ಡಿ 135 ಸಿಎಸ್‌ಎಲ್ 99(2)ನೇ ಸಂಖ್ಯೆಯ ಅಧಿಸೂಚನೆ;

48. ಆಯಿಲ್ ಕಂಪನಿಯವರು ನೇಮಕ ಮಾಡಿರುವ ಚಿಲ್ಲರೆ ಮಾರಾಟಗಾರರು ರಾಜ್ಯದ ಸ್ಥಳೀಯ ಪ್ರದೇಶಗಳಲ್ಲಿ ಪೆಟ್ರೋಲ್ ಮತ್ತು ಡೀಸಲ್‌ಗಳ ಮಾರಾಟಕ್ಕೆ ನೀಡಬೇಕಾಗಿದ್ದ ಪ್ರವೇಶ ತೆರಿಗೆಗೆ ದಿನಾಂಕ 14-5-98ರಿಂದ ವಿನಾಯಿತಿ ನೀಡಿ ದಿನಾಂಕ 8-10-99ರಂದು ಹೊರಡಿಸಿದ ಎಫ್‌ಡಿ 65 ಸಿಇಟಿ 99ನೇ ಸಂಖ್ಯೆಯ ಅಧಿಸೂಚನೆ;

49. ಭಾರತೀಯ ಕೆಥೋಲಿಕ ಹೆಲ್ಪ್ ಅಸೋಸಿಯೇಶನ್‌ರವರ ಔಷಧ ಸರಬರಾಜು ಮಾಡುವ ಜೀಪ್, ಆಂಬ್ಯುಲೆನ್ಸ್, ಮಿನಿ ಬಸ್ ವಾಹನಗಳಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ತಕ್ಷಣದಿಂದ 31-3-2000ದ ವರೆಗೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 29-10-99ರಂದು ಹೊರಡಿಸಿದ ಎಫ್‌ಡಿ 87 ಸಿಇಟಿ 99ನೇ ಸಂಖ್ಯೆಯ ಅಧಿಸೂಚನೆ;

50. ಕಂಪ್ಯೂಟರ್‌ಗಳನ್ನು ತಯಾರಿಸಲು ಉಪಯೋಗಿಸುವ ಕಚ್ಚಾ ಮತ್ತು ಕಾಂಪೊನೆಂಟ್ ಸಾಮಗ್ರಿಗಳನ್ನು ಸ್ಥಳೀಯ ಪ್ರದೇಶಗಳಿಗೆ ತರುವುದರ ಮೇಲೆ ದಿನಾಂಕ 1-11-99ರಿಂದ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ ವಿನಾಯಿತಿ ನೀಡಿ ದಿನಾಂಕ 25-11-99ರಂದು ಹೊರಡಿಸಿದ ಎಫ್‌ಡಿ 138 ಸಿಇಟಿ 99ನೇ ಸಂಖ್ಯೆಯ ಅಧಿಸೂಚನೆ;

1958ರ ಕರ್ನಾಟಕ ಮನರಂಜನಾ ತೆರಿಗೆ ಕಾಯಿದೆ 18ರ ಮೇರೆಗೆ;

51. ದಿನಾಂಕ 30-10-96ರ ಎಫ್‌ಡಿ 48 ಸಿಇಎಕ್ಸ್ 96ನೇ ಸಂಖ್ಯೆಯ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ದಿನಾಂಕ 10-12-99ರಂದು ಹೊರಡಿಸಿದ ಎಫ್‌ಡಿ 2 ಸಿಇಎಕ್ಸ್ 98ನೇ ಸಂಖ್ಯೆಯ ಅಧಿಸೂಚನೆ;

1948ರ ವಿದ್ಯುತ್ (ಸರಬರಾಜು) ಅಧಿನಿಯಮದ 69(5) (ಎ) ಪ್ರಕರಣದ ಮೇರೆಗೆ;

52. 1999-2000ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವಿತ್ತ ವಿವರಣೆ ಮತ್ತು 1998-99ನೇ ಸಾಲಿನ ಪರಿಷ್ಕೃತ ವಿತ್ತ ವಿವರಣಾ ವರದಿ;

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿನಿಯಮದ 39 (1)ನೇ ಪ್ರಕರಣದ ಮೇರೆಗೆ.

53. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 1998-99ನೇ ಸಾಲಿನ ವಾರ್ಷಿಕ ವರದಿ;

1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 57 (3) ರ ಮೇರೆಗೆ;

54. ಕರ್ನಾಟಕ ವಿದ್ಯುಚ್ಛಕ್ತಿ ರೆಗ್ಯೂಲೇಟರಿ ಆಯೋಗ (ಅಧ್ಯಕ್ಷರ ಹಾಗೂ ಸದಸ್ಯರುಗಳ ನೇಮಕಾತಿ) 1999ರ ನಿಯಮಗಳನ್ನು ರಚಿಸಿ ದಿನಾಂಕ 27-8-99ರಂದು ಹೊರಡಿಸಿದ ಡಿಇ 3 ಪಿಎಸ್ಆರ್ 99ನೇ ಸಂಖ್ಯೆಯ ಅಧಿಸೂಚನೆ;

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

55. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ,

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 20ನೇ ಪ್ರಕರಣದ ಮೇರೆಗೆ;

1. ಬೆಂಗಳೂರಿನ ಜಾಲಹಳ್ಳಿಯಲ್ಲಿರುವ ಭಾರತ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘದವರಿಗೆ ಅವರ ಸಭಾಂಗಣದಲ್ಲಿ 35 ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಸಿನಿಮಾ ನಿಯಂತ್ರಣ ಕಾಯ್ದೆಯಡಿ ಅನುಮತಿ ನೀಡಿ ದಿನಾಂಕ 10-11-99ರಂದು ಹೊರಡಿಸಿದ ಹೆಚ್ಡಿ 38 ಸಿಎನ್ಎ 99ನೇ ಸಂಖ್ಯೆಯ ಆದೇಶ;

2. ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಅಮೃತೂರು ಗ್ರಾಮದಲ್ಲಿ ನಿರ್ಮಾಣದ ಅಂತಿಮ ಹಂತದಲ್ಲಿರುವ ಶ್ರೀನಿವಾಸ ಚಲನಚಿತ್ರ ಮಂದಿರದ ಕಟ್ಟಡದ ಕಾರ್ಯಗಳನ್ನು ಮುಕ್ತಾಯಗೊಳಿಸಲು ನಿಗದಿಪಡಿಸಿದ್ದ ಕಾಲಾವಧಿಯನ್ನು ಸಿನಿಮಾ ನಿಯಂತ್ರಣ ಕಾಯ್ದೆಯಡಿ ವಿಸ್ತರಣೆ ಮಾಡಿ ದಿನಾಂಕ 18-11-99ರಂದು ಹೊರಡಿಸಿದ ಹೆಚ್ಡಿ 9 ಸಿಎನ್ಎ 99ನೇ ಸಂಖ್ಯೆಯ ಅಧಿಸೂಚನೆ;

1956ರ ಕಂಪನಿ ಕಾಯ್ದೆ ಅಧಿನಿಯಮ 619 (ಎ) ಪ್ರಕರಣದ ಮೇರೆಗೆ;

3. ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

III ಶ್ರೀ ಹೆಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 1980 ರ ಕಾಡಾ ಅಧಿನಿಯಮ 25ನೇ ಕಲಂ ಮೇರೆಗೆ. ಕಾಡಾ ಮಲಪ್ರಭಾ ಮತ್ತು ಘಟಪ್ರಭ ಯೋಜನೆಗಳ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

IV ಶ್ರೀ ಎಂ.ವೈ.ಘೋರ್ಪಡೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ;

1. ಕರ್ನಾಟಕ ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ) ಅಧ್ಯಾದೇಶ 1999ನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 7-12-99ರಂದು ಹೊರಡಿಸಿದ ಸಂವ್ಯಶಾಇ 45 ಶಾಸನ 99ನೇ ಸಂಖ್ಯೆಯ ಅಧಿಸೂಚನೆ;

2. ಕರ್ನಾಟಕ ಪಂಚಾಯತ್ ರಾಜ್ (ಮೂರನೇ ತಿದ್ದುಪಡಿ) ಅಧ್ಯಾದೇಶ 1999ನ್ನು ರಚಿಸುವ ಸಂಬಂಧದಲ್ಲಿ ದಿನಾಂಕ ಹೊರಡಿಸಿದ ಸಂವ್ಯ ಶಇ 40 ಶಾಸನ 99ನೇ ಸಂಖ್ಯೆಯ ಅಧಿಸೂಚನೆ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 320ನೇ ಪ್ರಕರಣದ ಮೇರೆಗೆ.

3. ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 19-1-2000ದಂದು ಹೊರಡಿಸಿದ ಗ್ರಾಅಪ 207 ಗ್ರಾಪಸ 99ನೇ ಸಂಖ್ಯೆಯ ಅಧಿಸೂಚನೆ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 300(5)ನೇ ಪ್ರಕರಣದ ಮೇರೆಗೆ

4. ಮೈಸೂರು ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

5. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

6. ಮಂಡ್ಯ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

7. ಬಿಜಾಪುರ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

8. ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

9. ಕೊಪ್ಪಳ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

10. ಹಾಸನ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

11. ಬಳ್ಳಾರಿ ಜಿಲ್ಲಾ ಪಂಚಾಯತ್ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ;

1956ರ ಕಂಪನಿ ಕಾಯ್ದೆ 619 (4)ರ ಮೇರೆಗೆ.

12. ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 1997-98ನೇ ಸಾಲಿನ ವಾರ್ಷಿಕ ವರದಿ;

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3) ನೇ ಪ್ರಕರಣದ ಮೇರೆಗೆ;

13. ತುಮಕೂರು ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ;

14. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಗಳ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

V. ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ರಾಜ್ಯ ಗೇರು ಅಭಿವೃದ್ಧಿ ನಿಗಮದ 1998-99ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ 1998-99ನೇ ಸಾಲಿನ ವಾರ್ಷಿಕ ವರದಿ;

3. ದಿ ಮೈಸೂರು ಮ್ಯಾಚ್ ಕಂಪನಿಯ 1998-99ನೇ ಸಾಲಿನ ವಾರ್ಷಿಕ ವರದಿ;

4. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವಿಮರ್ಶೆ ಹಾಗೂ ಲೆಕ್ಕಪರಿಶೋಧನಾ ವರದಿ;

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಯ ಕಂಡಿಕೆ 40 (7)ರ ಮೇರೆಗೆ;

5. 1997-98ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VI ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ;

1. 1999ರ ಕರ್ನಾಟಕ ರಾಜ್ಯ ಬಾಡಿಗೆ ನಿಯಂತ್ರಣ (ತಿದ್ದುಪಡಿ) ನಿಯಮಗಳ ಸಂಬಂಧ ದಿನಾಂಕ 31-12-99ರಂದು ಹೊರಡಿಸಿದ ಸಂಖ್ಯೆ ಡಿಪಿಎಆರ್ 43 ಶಾಸನ 99ನೇ ಸಂಖ್ಯೆಯ ಅಧ್ಯಾದೇಶ;

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48 (5) ಹಾಗೂ 49ನೇ ಕಲಂ ಮೇರೆಗೆ;

2. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 1997-98ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

3. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕತಪಾಸಣಾ ವರದಿ;

4. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 1997-98ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

5. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕತಪಾಸಣಾ ವರದಿ;

6. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕ ತನಿಖಾ ವರದಿ;

7. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

8. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕ ತನಿಖಾ ವರದಿ;

9. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 1998-99ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

1974ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿನಿಯಮ 39(1)ನೇ ಪ್ರಕರಣದ ಮೇರೆಗೆ;

10. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 1998-99ನೇ ಸಾಲಿನ ವಾರ್ಷಿಕ ವರದಿ

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 20 (11)ರ ನಿಯಮದ ಮೇರೆಗೆ;

11. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VII. ಶ್ರೀ ಎಂ.ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 519(ಎ) ಪ್ರಕರಣದ ಮೇರೆಗೆ;

ಕೊಂಕಣ ರೈಲ್ವೆ ನಿಗಮ ನಿಯಮಿತದ 1997-98ನೇ ಹಾಗೂ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VIII ಶ್ರೀ ಎಂ.ಕೃಷ್ಣಪ್ಪ, (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ ವಾರ್ಷಿಕ ಮತ್ತು 31-3-99ರ ಲೆಕ್ಕಪತ್ರಗಳ ವರದಿ;

2. ಕರ್ನಾಟಕ ಹಾಲು ಅಭಿವೃದ್ಧಿ ಮಂಡಳಿಯ 1996-97ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಪರಿಶೋಧನಾ ವರದಿ;

1973ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮದ 24ನೇ ಪ್ರಕರಣದ ಮೇರೆಗೆ.

3. ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ವರದಿಗಳನ್ನು ಮಂಡಿಸುತ್ತೇನೆ.

IX ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು):

ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ;

2. ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

X ಶ್ರೀ ಖಮರಲ್ ಇಸ್ಲಾಂ (ವಸತಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ ನಿಯಮ 20 (2)ರ ಮೇರೆಗೆ.

1. ಕರ್ನಾಟಕ ಗೃಹ ಮಂಡಳಿ ರಾಜ್ಯ ವಸತಿ ಯೋಜನೆಗಳ 1998-99ನೇ ಸಾಲಿನ ವಾರ್ಷಿಕ ವರದಿ;

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 69ನೇ ಪ್ರಕರಣದ ಮೇರೆಗೆ;

2. ಕರ್ನಾಟಕ ಗೃಹ ಮಂಡಳಿಯ 1996-97ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ತಪಾಸಣೆ ವರದಿಗಳನ್ನು ಮಂಡಿಸುತ್ತೇನೆ.

XI ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ; ಎನ್.ಜಿ.ಇ.ಎಫ್. ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ವರದಿ; ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 1997-98ನೇ ಸಾಲಿನ ವಾರ್ಷಿಕ ವರದಿ; ಮೈಸೂರು ಬಣ್ಣ ಮತ್ತು ಅರಗು ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ; ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ;

2. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ; ಮೈಸೂರು ಸ್ಪೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ; ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ;

3. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ; ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ; ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿ.

4. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 1998-99ನೇ ಸಾಲಿನ ವಾರ್ಷಿಕ

ವರದಿ;

5. ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ; ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಷಿನರೀಸ್ ಕಂಪನಿ (ಕಿಂಕೋ) ನಿಯಮಿತದ 1997-98ನೇ ಸಾಲಿನ ವಾರ್ಷಿಕ ವರದಿ;

6. ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 1997-98ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XII ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XIII ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ,

1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ 194 (1) (11)ನೇ ಪ್ರಕರಣದ ಮೇರೆಗೆ.

1. ಬೀದರ್ ಜಿಲ್ಲೆಯ ಔರಾದ್ (ಬಿ) ತಾಲ್ಲೂಕಿನ 149 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.2,07, 389.00ಗಳನ್ನು ಮನ್ನಾ ಮಾಡಿ ದಿನಾಂಕ 18-8-99ರಂದು ಹೊರಡಿಸಿದ ಆರ್‌ಡಿ 306 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

2. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ 331 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ. 1,07,537.00ಗಳನ್ನು ಮನ್ನಾ ಮಾಡಿ ದಿನಾಂಕ 8-9-99ರಂದು ಹೊರಡಿಸಿದ ಆರ್‌ಡಿ 218 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

3. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ 30 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ. 17,535.00ಗಳನ್ನು ಮನ್ನಾ ಮಾಡಿ ದಿನಾಂಕ 22-10-99ರಂದು ಹೊರಡಿಸಿದ ಆರ್‌ಡಿ 270 ಟಿಆರ್‌ಎಂ 98ನೇ ಸಂಖ್ಯೆಯ

ಅಧಿಸೂಚನೆ;

4. ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ 43 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.52,493.49ಗಳನ್ನು ಮನ್ನಾ ಮಾಡಿ ದಿನಾಂಕ 22-10-99ರಂದು ಹೊರಡಿಸಿದ ಆರ್ಡಿ 436 ಟಿಆರ್ಎಂ 98ನೇ ಸಂಖ್ಯೆಯ ಅಧಿಸೂಚನೆ;

5. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ 17 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.49,117.96ಗಳನ್ನು ಮನ್ನಾ ಮಾಡಿ ದಿನಾಂಕ 22-1-99ರಂದು ಹೊರಡಿಸಿದ ಆರ್ಡಿ 271 ಟಿಆರ್ಎಸ್ 99ನೇ ಸಂಖ್ಯೆಯ ಅಧಿಸೂಚನೆ;

6. ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ 690 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.30,092.00ಗಳನ್ನು ಮನ್ನಾ ಮಾಡಿ ದಿನಾಂಕ 23-10-96ರಂದು ಹೊರಡಿಸಿದ ಆರ್ಡಿ 247 ಟಿಆರ್ಎಂ 99ನೇ ಸಂಖ್ಯೆಯ ಅಧಿಸೂಚನೆ;

7. ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ 87 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.51,066.77ಗಳನ್ನು ಮನ್ನಾ ಮಾಡಿ ದಿನಾಂಕ 23-10-99ರಂದು ಹೊರಡಿಸಿದ ಆರ್ಡಿ 248 ಟಿಆರ್ಎಂ 99ನೇ ಸಂಖ್ಯೆಯ ಅಧಿಸೂಚನೆ;

8. ಹಾಸನ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನ 62 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.92,620.72ಗಳನ್ನು ಮನ್ನಾ ಮಾಡಿ ದಿನಾಂಕ 27-7-99ರಂದು ಹೊರಡಿಸಿದ ಆರ್ಡಿ 348 ಟಿಆರ್ಎಂ 98ನೇ ಸಂಖ್ಯೆಯ ಅಧಿಸೂಚನೆ;

9. ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ 227 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.72,881.00ಗಳನ್ನು ಮನ್ನಾ ಮಾಡಿ ದಿನಾಂಕ 3-11-99ರಂದು ಹೊರಡಿಸಿದ ಆರ್ಡಿ 288 ಟಿಆರ್ಎಂ 99ನೇ ಸಂಖ್ಯೆಯ ಅಧಿಸೂಚನೆ;

10. ಕೋಲಾರ ಜಿಲ್ಲೆಯ 362 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.3.31,484.00ಗಳನ್ನು ಮನ್ನಾ ಮಾಡಿ ದಿನಾಂಕ 25-10-99ರಂದು ಹೊರಡಿಸಿದ ಆರ್ಡಿ 268 ಟಿಆರ್ಎಂ 99ನೇ ಸಂಖ್ಯೆಯ ಅಧಿಸೂಚನೆ;

11. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ 18 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.26,546.44ಗಳನ್ನು ಮನ್ನಾ ಮಾಡಿ ದಿನಾಂಕ 27-10-99ರಂದು ಹೊರಡಿಸಿದ ಆರ್ಡಿ 243 ಟಿಆರ್ಎಂ 99ನೇ ಸಂಖ್ಯೆಯ ಅಧಿಸೂಚನೆ;

12. ಹಾವೇರಿ ಜಿಲ್ಲೆಯ ಹಿರೆಕೆರೂರು ತಾಲ್ಲೂಕಿನ 35 ಗ್ರಾಮಗಳ 1998-99ನೇ

ಸಾಲಿನ ಭೂ ಕಂದಾಯ ರೂ. 10,865.44ಗಳನ್ನು ಮನ್ನಾ ಮಾಡಿ ದಿನಾಂಕ 2-12-99ರಂದು ಹೊರಡಿಸಿದ ಆರ್‌ಡಿ 298 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

13. ಮೈಸೂರು ಜಿಲ್ಲಾ ಟೀ.ನರಸೀಪುರ ತಾಲ್ಲೂಕಿನ 35 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.20,470.00ಗಳನ್ನು ಮನ್ನಾ ಮಾಡಿ ದಿನಾಂಕ 17-12-99 ಹೊರಡಿಸಿದ ಆರ್‌ಡಿ 350 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

14. ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ 55 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.75,538.57ಗಳನ್ನು ಮನ್ನಾ ಮಾಡಿ ದಿನಾಂಕ 12-7-99ರಂದು ಹೊರಡಿಸಿದ ಆರ್‌ಡಿ 124 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

15. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 228 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.38,137.87ಗಳನ್ನು ಮನ್ನಾ ಮಾಡಿ ದಿನಾಂಕ 13-7-99ರಂದು ಹೊರಡಿಸಿದ ಆರ್‌ಡಿ 125 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

16. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ 29 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.85,536.29ಗಳನ್ನು ಮನ್ನಾ ಮಾಡಿ ದಿನಾಂಕ 8-12-99ರಂದು ಹೊರಡಿಸಿದ ಆರ್‌ಡಿ 302 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮುದ್ರಾಂಕ ಅಧಿನಿಯಮ 9(2)ನೇ ಪ್ರಕರಣದ ಮೇರೆಗೆ.

17. ಶ್ರೀ ಸುಬಾಸ್ ಚಂದ್ರ ಬೋಸ್ ಜನ್ಮ ಶತಾಬ್ದಿ ಟ್ರಸ್ಟ್ ಇವರಿಗೆ ಬೆಂಗಳೂರಿನ ಐಡಿಯಲ್ ಹೋಮ್ಸ್ ಗೃಹ ನಿರ್ಮಾಣ ಸಹಕಾರ ಸಂಘ ರಾಜರಾಜೇಶ್ವರಿ ನಗರದಲ್ಲಿ ನೀಡಿರುವ ಜಮೀನಿಗೆ ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕಕ್ಕೆ ಶೇಕಡ 50ರಷ್ಟು ಶುಲ್ಕ ವಿನಾಯಿತಿ ನೀಡಿ ದಿನಾಂಕ 22-2-99ರಂದು ಹೊರಡಿಸಿದ ಕಂಇ 561 ಮುನೋಮು 98ನೇ ಸಂಖ್ಯೆಯ ಆದೇಶ;

18. ಚಿಕ್ಕಮಗಳೂರು ಜಿಲ್ಲೆಯ, ಶೃಂಗೇರಿ ಪಟ್ಟಣದ ಬಸ್ ನಿಲ್ದಾಣ ನಿರ್ಮಿಸುವ ಪಂಚಾಯಿತಿಯಿಂದ ಮಂಜೂರಾದ ನಿವೇಶನಗಳ ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕಕ್ಕೆ ಶೇಕಡ 50ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ನೀಡಿ ದಿನಾಂಕ 5-6-99ರಂದು ಹೊರಡಿಸಿದ ಕಂಇ 333 ಮುನೋಮು 96ನೇ ಸಂಖ್ಯೆಯ ಆದೇಶ;

19. ಬೆಂಗಳೂರಿನ ವೈಟ್ ಫೀಲ್ಡ್‌ನಲ್ಲಿರುವ ಇಂಟರ್‌ನ್ಯಾಷನಲ್ ಟೆಕ್ನಾಲಜಿ ಪಾರ್ಕ್

ಲಿಮಿಟೆಡ್ ಇವರು ನಿರ್ಮಿಸಿರುವ ಸ್ಥಳದ ಮಾರಾಟಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ, 2ನೇ ಬಾರಿ ಆಸ್ತಿ ವರ್ಗಾವಣೆ ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕಕ್ಕೆ ಶೇಕಡ 50 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ನೀಡಿ ದಿನಾಂಕ 16-6-99ರಂದು ಹೊರಡಿಸಿದ ಕಂಇ 407 ಮುನೋಮು 98ನೇ ಸಂಖ್ಯೆಯ ಆದೇಶಗಳನ್ನು ಮಂಡಿಸುವುದು.

XIV. ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಅವರು:

1987ರ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ ಕಾಯ್ದೆ 18 (4)ರ ಮೇರೆಗೆ;

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 1997-98ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ 1998-99ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XV ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ.

1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ನಿಯಮ 28 (ಎ), 29(ಎಫ್) ಇವುಗಳಿಗೆ ತಿದ್ದುಪಡಿ ಮಾಡಿ ಹಾಗೂ 30(ಬಿ) ಮತ್ತು 53(ಎ) ನಿಯಮಗಳನ್ನು ಕಾಯಿದೆಗೆ ಹೊಸದಾಗಿ ಸೇರ್ಪಡೆಗೊಳಿಸಿ ದಿನಾಂಕ 25-2-2000ದಂದು ಹೊರಡಿಸಿದ ಡಿಪಿಎಆರ್ 47 ಶಾಸನ 99ನೇ ಸಂಖ್ಯೆಯ ಅಧ್ಯಾದೇಶ

1962 ಉಗ್ರಾಣ ನಿಗಮಗಳ ಕಾಯ್ದೆಯ 31(11)ನೇ ಪ್ರಕರಣದ ಮೇರೆಗೆ.

2. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 1997-98ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XVI ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ,

ಕೃಷಿ ವಿಶ್ವವಿದ್ಯಾಲಯ ಕಾಯ್ದೆ 8(9) ರ ಕಲಂ ಮೇರೆಗೆ;

1. ಅಸಿಸ್ಟೆಂಟ್ ಪ್ರೊಫೆಸರ್ ಕನ್ನಡ (ತಾಂತ್ರಿಕ) ಮತ್ತು ಪ್ರೊಫೆಸರ್ ಅನಿಮಲ್

ನ್ಯೂಟ್ರಿಷನ್ ಮತ್ತು ಮ್ಯಾನೇಜ್‌ಮೆಂಟ್ ಹುದ್ದೆಗಳ ನೇಮಕಾತಿ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ದಿನಾಂಕ 9-9-98 ಮತ್ತು 19-11-98ನೇ ದಿನಾಂಕದ ನಡವಳಿಕೆಗಳನ್ನು ರದ್ದುಪಡಿಸಿ, ಹೊರಡಿಸಿದ ಕೃತೋಇ 135 ಕೃವಿವಿ 98ನೇ ಸಂಖ್ಯೆಯ ಆದೇಶ;

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

2. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್‌ನ 1997-98ನೇ ಸಾಲಿನ ವಾರ್ಷಿಕ ವರದಿ;

3. ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಮಗ ನಿಯಮಿತದ 1997-98ನೇ ಸಾಲಿನ ವಾರ್ಷಿಕ ವರದಿ;

4. ದಿ ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್‌ನ 1997-98ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ವರದಿ;

5. ದಿ ಮೈಸೂರು ಟೊಬ್ಯಾಕೊ ಕಂಪನಿ ಲಿಮಿಟೆಡ್‌ನ 1998-99ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ;

1963ರ ಕೃಷಿ ವಿಶ್ವವಿದ್ಯಾಲಯಗಳ ಅಧಿನಿಯಮ 38(3)ನೇ ಪ್ರಕರಣದ ಮೇರೆಗೆ;

6. ಧಾರವಾಡ ಕೃಷಿ ವಿಶ್ವವಿದ್ಯಾಲಯದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XVII ಶ್ರೀ ಎಂ.ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ 1998-99ನೇ ಸಾಲಿನ ವಾರ್ಷಿಕ ವರದಿ; ಕರ್ನಾಟಕ ರೇಷ್ಮೆ ಕೈಗಾರಿಕೋದ್ಯಮ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XVIII ಶ್ರೀ ರಮಾನಾಥ್ ರೈ (ಮಿನುಗಾರಿಕೆ ಹಾಗೂ ಬಂದರು ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ಲೆಕ್ಕಪತ್ರ ವರದಿ;

2. ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ವರದಿಗಳನ್ನು ಮಂಡಿಸುತ್ತೇನೆ.

XIX ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) ಅವರ ಪರವಾಗಿ ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ ಕಲಂ 8 (9)ರ ಮೇರೆಗೆ; ಅನ್ವಯಿತ

1. ಮೈಸೂರು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಎಲೆಕ್ಟ್ರೀಷಿಯನ್ ಶ್ರೀ ದೇವರಾಜ ಶೆಟ್ಟಿರವರ ಕಾನೂನು ಬಾಹಿರವಾಗಿ ಸಕ್ರಮಗೊಳಿಸಲಾದ ನಿರ್ಣಯಕ್ಕೆ ಸಂಬಂಧಿಸಿದಂತೆ ದಿನಾಂಕ 18-5-99ರಂದು ಹೊರಡಿಸಿದ ಇಡಿ 141 ಯುಎಂವಿ 98ನೇ ಸಂಖ್ಯೆಯ ಅಧಿಸೂಚನೆ;

2. ಮೈಸೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ಸಂಶೋಧನಾ ಸಹಾಯಕರಿಗೆ ಯು.ಜಿ.ಸಿ.ವೇತನ ಶ್ರೇಣಿಯ ವಿಸ್ತರಣೆ ಸಂಬಂಧಿಸಿದಂತೆ ದಿನಾಂಕ 1-7-99ರಂದು ಹೊರಡಿಸಿದ ಇಡಿ 128 ಯುಎಂವಿ 98ನೇ ಸಂಖ್ಯೆಯ ಅಧಿಸೂಚನೆ;

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 45(2) ಹಾಗೂ 42(3)ನೇ ಪ್ರಕರಣದ ಮೇರೆಗೆ.

3. ಮಂಗಳೂರು ವಿಶ್ವವಿದ್ಯಾಲಯದ 1997-98ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನಾ ವರದಿ.

4. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 1996-97ನೇ ಸಾಲಿನ ಲೆಕ್ಕಪರಿಶೋಧನಾ ವರದಿ. ಗುಲ್ಬರ್ಗಾ ವಿಶ್ವವಿದ್ಯಾಲಯ 1997-98ನೇ ಸಾಲಿನ ವಾರ್ಷಿಕ ವರದಿ ಹಾಗೂ 1996-97ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

XX. ಪ್ರೋ.ಬಿ.ಕೆ.ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ, 1956ರ ಕಂಪನಿ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ.

1. ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ 1997-98ನೇ ಮತ್ತು 1998-99ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XXI ಶ್ರೀ ಅಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ,

1956 ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;

1. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ;

3. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡೆಕ್ಸ್ ಸಂಸ್ಥೆಯ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಕಾಗದ ಪತ್ರಗಳನ್ನು ಸಭೆ ಮುಂದೆ ಮಂಡಿಸಲಾಯಿತು,

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಮೊದಲನೆಯ ಸದನದಲ್ಲಿ ಮಾನ್ಯ ಸಭಾನಾಯಕರು ಒಂದು ವಿಚಾರವನ್ನು ಹೇಳಿದ್ದರು, ನಾನು ಅದನ್ನು ಇಲ್ಲೆ ಕುಳಿತುಕೊಂಡು ಕೇಳಿದ್ದೆ. ಯಾವ ಸಚಿವರು ಬಂದಿರುವುದಿಲ್ಲ ಅವರ ಕಾಗದಪತ್ರಗಳನ್ನು ಬೇರೆಯವರು ಮಂಡಿಸುವುದು ಬೇಡ ಎಂಬುದಾಗಿ ಅವರು ಹೇಳಿದ್ದರು.

ಅಧ್ಯಕ್ಷರು: ಮಾನ್ಯ ಹೆಚ್.ಕೆ.ಪಾಟೀಲರು, ಡಿ.ಬಿ.ಚಂದ್ರೇಗೌಡರು ಮೇಲ್ಮನೆಯಲ್ಲಿ ಇದ್ದಾರೆ. ಅವರು ಅಲ್ಲಿಗೆ ಹೋಗುವುದು ಬೇಡ ಎಂದು ಹೇಳುತ್ತೀರಾ? ಸ್ವಲ್ಪ ಸಮಯದ ಹಿಂದೆ ಅವರಿಬ್ಬರು ಇಲ್ಲೇ ಇದ್ದರಲ್ಲ? ಅವರು ಆ ಮನೆಯಲ್ಲಿರುವುದಾಗಿ ಹೇಳಿ ಕಳಿಸಿದ್ದಾರೆ.